# ಕರ್ನಾಟಕ ಸರ್ಕಾರ
# ರಾಜ್ಯ ಅಬಕಾರಿ ಇಲಾಖೆ
# 2016-17 ನೇ ಸಾಲಿನ ಇಲಾಖಾ ವಾರ್ಷಿಕ ವರದಿ

(ದಿನಾಂಕ: 01-04-2016 ರಿಂದ 31-03-2017)

## ಅಧ್ಯಾಯ – 1
## ದೂರ ದೃಷ್ಟಿ, ಧ್ಯೇಯ, ಉದ್ದೇಶ ಮತ್ತು ಕರ್ತವ್ಯಗಳು

### 1.1 ದೂರ ದೃಷ್ಟಿ :

ಸುರಕ್ಷಿತವಲ್ಲದ ಮದ್ಯದ ಬಳಕೆಯನ್ನು ನಿಯಂತ್ರಿಸುವುದರ ಮೂಲಕ ಅಬಕಾರಿ ಆದಾಯದಲ್ಲಿ ಉತ್ತಮತೆಯನ್ನು ಸಾಧಿಸುವುದು ಮತ್ತು ಮದ್ಯ ಬಳಕೆದಾರರಿಗೆ ಆರೋಗ್ಯಕರ ವಾತಾವರಣದಲ್ಲಿ ಮದ್ಯದ ಸರಬರಾಜನ್ನು ಖಾತರಿಪಡಿಸುವುದು

### 1.2 ಧ್ಯೇಯ :

ಮದ್ಯಸಾರ, ಮದ್ಯಸಾರಯುಕ್ತ ತಯಾರಿಕೆಗಳು, ಬಳಕೆಯೋಗ್ಯ ಮದ್ಯ ಮತ್ತು ಇತರೆ ಮತ್ತು ಬರಿಸುವ ಪದಾರ್ಥಗಳ ವಹಿವಾಟು ಹಾಗೂ ಇವುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ, ಮಾರಾಟ ಮತ್ತು ಇತರೆ ಚಟುವಟಿಕೆಗಳನ್ನು ಕ್ರಮಗೊಳಿಸುವುದು ಮತ್ತು ಈ ಚಟುವಟಿಕೆಗಳಿಗೆ ಸಂಬಂಧಪಟ್ಟ ರಾಜ್ಯ ಅಬಕಾರಿ ರೀತಿ-ನೀತಿಯನ್ನು ಜಾರಿಗೊಳಿಸುವುದು ಹಾಗೂ ಸಂಬಂಧಿತ ತೆರಿಗೆ ಸಂಗ್ರಹಣೆಯ ಮೇಲುಸ್ತುವಾರಿ ಕೈಗೊಳ್ಳುವುದು.

### 1.3 ಉದ್ದೇಶಗಳು :

1. ರಾಜ್ಯದ ಬೊಕ್ಕಸಕ್ಕೆ ಆದಷ್ಟು ಹೆಚ್ಚಿನ ರಾಜಸ್ವವನ್ನು ಸಂಗ್ರಹಿಸುವುದು
2. ಎಲ್ಲಾ ಅಬಕಾರಿ ವಸ್ತುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ ಮತ್ತು ಮಾರಾಟವನ್ನು ಕ್ರಮಬದ್ಧಗೊಳಿಸುವುದು
3. ಅಬಕಾರಿ ಸಂಬಂಧಿತ ಅಪರಾಧಗಳನ್ನು ನಿಯಂತ್ರಿಸಲು ಪರಿಣಾಮಕಾರಿ ಜಾರಿ ಮತ್ತು ತನಿಖೆ
4. ಸಮರ್ಥತೆಯನ್ನು ಉತ್ತಮಪಡಿಸಲು ತರಬೇತಿ ನೀಡುವುದು ಮತ್ತು ಇ-ಆಡಳಿತ ಉಪಕ್ರಮಗಳನ್ನು ರೂಪಿಸುವುದು.

### 1.4 ಕಾರ್ಯಗಳು :

1. ಅಬಕಾರಿ ರಾಜಸ್ವ ಸಂಗ್ರಹಣೆ
2. ಎಲ್ಲಾ ಅಬಕಾರಿ ವಸ್ತುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ ಮತ್ತು ಮಾರಾಟಕ್ಕಾಗಿ ಸನ್ನದುಗಳನ್ನು ನೀಡುವುದು.
3. ನಿರ್ದಿಷ್ಟ ಅಬಕಾರಿ ಸನ್ನದು ಪ್ರದೇಶಗಳ ತಪಾಸಣೆ ಕೈಗೊಳ್ಳುವುದು, ನಿಯತವಾಗಿ ದಾಳಿ ಮತ್ತು ರಸ್ತೆ ಗಸ್ತುಗಳನ್ನು ನಡೆಸುವುದು.
4. ಇಲಾಖೆಯ ವಿವಿಧ ಆಡಳಿತ ಹಂತಗಳಲ್ಲಿನ ಸಾಧನೆಯನ್ನು ನಿಯತ ಮಧ್ಯಂತರ ಅವಧಿಗಳಲ್ಲಿ ಪುನರ್ವಿಮರ್ಶಿಸುವುದು.
5. ಅಧಿಕಾರಿಗಳು ಮತ್ತು ಸಿಬ್ಬಂದಿಯ ತರಬೇತಿ.
6. ಅಬಕಾರಿ ಪರಿಶೀಲನಾ ಪ್ರಮಾಣ ಪತ್ರಗಳು (EVC) ಮತ್ತು ರಹದಾರಿ ಪ್ರಮಾಣ ಪತ್ರಗಳ ಪರಿಶೀಲನೆ.
7. ಅಬಕಾರಿ ಅಪರಾಧ ಪ್ರಕರಣಗಳ ನೋಂದಣಿ, ತನಿಖೆ ಹಾಗೂ ಕಾನೂನು ಕ್ರಮ ಜರುಗಿಸುವುದು.
8. ಎಲ್ಲಾ ಅಬಕಾರಿ ಸಂಬಂಧಿತ ವಸ್ತುಗಳ ವಹಿವಾಟಿನ ಮೇಲುಸ್ತುವಾರಿ.
9. ಇಲಾಖೆಯ ಕಾರ್ಯಚಟುವಟಿಕೆಗಳ ಗಣಕೀಕರಣ.

**ಅ. ರಾಜ್ಯ ಮಟ್ಟದ ಅಧಿನಿಯಮಗಳು :**

1. ಕರ್ನಾಟಕ ಅಬಕಾರಿ ಕಾಯ್ದೆ 1965.
2. ಕರ್ನಾಟಕ ಪಾನ ನಿರೋಧ ಕಾಯ್ದೆ 1961.
3. ಮೇಲ್ಕಂಡ ಕಾಯ್ದೆಗಳ ಮೇರೆಗೆ ರಚಿತವಾದ ನಿಯಮಗಳು.
4. ನಾರ್ಕೊಟಿಕ್ ಡ್ರಗ್ಸ್ ಅಂಡ್ ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ (ಕರ್ನಾಟಕ) ನಿಯಮಗಳು 1985.
5. ಕರ್ನಾಟಕ ಪ್ರಿವೆಂಶನ್ ಆಫ್ ಡೇಂಜರಸ್ ಆಕ್ಟಿವಿಟೀಸ್ ಆಫ್ ಬೂಟ್‌ಲೆಗ್ಗರ್ಸ್, ಡ್ರಗ್ ಅಫೆಂಡರ್ಸ್, ಗ್ಯಾಂಬ್ಲರ್ಸ್, ಗೂಂಡಾಸ್, ಇಮ್ಮಾರಲ್ ಟ್ರಾಫಿಕ್ ಅಫೆಂಡರ್ಸ್ ಅಂಡ್ ಸ್ಲಮ್ ಗ್ರಾಬರ್ಸ್ ಕಾಯ್ದೆ 1985.

**ಆ. ಕೇಂದ್ರ ಮಟ್ಟದ ಅಧಿನಿಯಮಗಳು :**

1. ಮೆಡಿಸಿನಲ್ ಅಂಡ್ ಟಾಯ್ಲೆಟ್ ಪ್ರಿಪರೇಷನ್ಸ್ (ಎಕ್ಸೈಜ್ ಡ್ಯೂಟೀಸ್) ಕಾಯ್ದೆ, 1955 ಮತ್ತು ನಿಯಮಗಳು 1956
2. ನಾರ್ಕೊಟಿಕ್ ಡ್ರಗ್ ಅಂಡ್ ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ ಕಾಯ್ದೆ 1985 (1985ರ ಕೇಂದ್ರ ಕಾಯ್ದೆ ಸಂಖ್ಯೆ 61)

**1.5 ಸಂಘಟನೆ ಮತ್ತು ರಚನೆ :**

1.5.1 ಅಬಕಾರಿ ಆಯುಕ್ತರು ಹಿರಿಯ ಐ.ಎ.ಎಸ್. ಶ್ರೇಣಿಯವರಾಗಿದ್ದು ಇಲಾಖೆಯ ಮುಖ್ಯಸ್ಥರಾಗಿದ್ದಾರೆ. ಇಲಾಖೆಯ ಕೇಂದ್ರ ಸ್ಥಳವು ಬೆಂಗಳೂರಿನಲ್ಲಿರುತ್ತದೆ. ಇಲಾಖೆಯ ವ್ಯವಹಾರಗಳಲ್ಲಿ ಅಬಕಾರಿ ಆಯುಕ್ತರಿಗೆ ಸಹಕರಿಸಲು ಹೆಚ್ಚುವರಿ ಅಬಕಾರಿ ಆಯುಕ್ತರು (ಅಪರಾಧ ಮತ್ತು ಜಾರಿ), ಹೆಚ್ಚುವರಿ ಅಬಕಾರಿ ಆಯುಕ್ತರು (ಭಾ.ತ.ಮ), ಅಲ್ಲದೆ ಅಬಕಾರಿ ಜಂಟಿ ಆಯುಕ್ತರು (ಡಿಸ್ಟಲರಿ ಮತ್ತು ಬ್ರಿವರಿ), ಉಪ ಆಯುಕ್ತರು (ಆಡಳಿತ), ಒಬ್ಬರು ಅಬಕಾರಿ ಉಪ ಆಯುಕ್ತರು (ಕಾನೂನು), ಅಬಕಾರಿ ಆಯುಕ್ತರ ಕೇಂದ್ರ ಸ್ಥಾನಿಕ ಸಹಾಯಕರು I ಮತ್ತು II (ಅಬಕಾರಿ ಅಧೀಕ್ಷಕರ ಶ್ರೇಣಿ) ಒಳಗೊಂಡಂತೆ 5 ಅಬಕಾರಿ ಅಧೀಕ್ಷಕರು. 6 ಅಬಕಾರಿ ಉಪ ಅಧೀಕ್ಷಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ನಿಯೋಜನೆ ಮೇರೆಗೆ ಒಬ್ಬರು ಉಪ ನಿರ್ದೇಶಕರು (ಸಾಂಖ್ಯಿಕ), ಒಬ್ಬರು ಸಹಾಯಕ ನಿರ್ದೇಶಕರು (ಸಾಂಖ್ಯಿಕ), ಮಹಾಲೇಖಪಾಲರ ಕಛೇರಿಯಿಂದ ನಿಯೋಜನೆ ಮೇರೆಗೆ ಒಬ್ಬರು ಹಿರಿಯ ಲೆಕ್ಕಾಧಿಕಾರಿಗಳು ಮತ್ತು ಒಬ್ಬರು ಹಿರಿಯ ಆಡಿಟ್ ಅಧಿಕಾರಿಗಳು (ಲೆಕ್ಕ ಪರಿಶೋಧನೆ) ಅಬಕಾರಿ ಆಯುಕ್ತರಿಗೆ ಸಹಾಯಕರಾಗಿರುತ್ತಾರೆ.

**1.5.2. ರಾಜ್ಯ ಅಬಕಾರಿ ವಿಚಕ್ಷಣ ದಳ, ಬೆಂಗಳೂರು :**

ಅಬಕಾರಿ ಜಂಟಿ ಆಯುಕ್ತರವರ ನೇತೃತ್ವದಲ್ಲಿರುವ ರಾಜ್ಯ ಅಬಕಾರಿ ವಿಚಕ್ಷಣ ದಳವು ರಾಜ್ಯ ಕಾರ್ಯವ್ಯಾಪ್ತಿ ಅಧಿಕಾರ ಹೊಂದಿದ್ದು, ಬೆಂಗಳೂರು ಇದರ ಕೇಂದ್ರಸ್ಥಾನವಾಗಿದ್ದು, ಅಬಕಾರಿ ಆಯುಕ್ತರ ನೇರ ನಿಯಂತ್ರಣದಲ್ಲಿ ಕೆಲಸ ಮಾಡುತ್ತದೆ. ವಿಚಕ್ಷಣೆ, ಮಾಹಿತಿ ಪೂರೈಕೆ, ಕಳ್ಳಭಟ್ಟಿ ತಯಾರಿಕೆ, ನಕಲಿ ಮದ್ಯ ತಯಾರಿಕೆ, ಅಕ್ರಮ ಮದ್ಯ ಹಾಗೂ ಮದ್ಯಸಾರದ ಸಾಗಾಣಿಕೆ, ಅಬಕಾರಿ ಶುಲ್ಕ ತಪ್ಪಿಸಿಕೊಳ್ಳುವುದು ಇತ್ಯಾದಿ ಅಬಕಾರಿ ನಿಯಮಗಳ ಉಲ್ಲಂಘನೆ ತಡೆಯುವಲ್ಲಿ ಅಬಕಾರಿ ಆಯುಕ್ತರಿಗೆ ಒತ್ತಾಸೆಯಾಗಿ ಕಾರ್ಯನಿರ್ವಹಿಸುತ್ತದೆ. ಅದರ ಜೊತೆಗೆ ಬೆಂಗಳೂರು ನಗರದಲ್ಲಿ 4 ವಿಚಕ್ಷಣ ದಳಗಳು ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿಯೊಂದು ದಳಕ್ಕೆ ಅಬಕಾರಿ ಅಧೀಕ್ಷಕರೊಬ್ಬರು ಮುಖ್ಯಸ್ಥರಾಗಿದ್ದು, ಇವರು ಅಬಕಾರಿ ಉಪ ಆಯುಕ್ತರು ನಗರ ಜಿಲ್ಲೆ (ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ) ಇವರ ಆಡಳಿತಾತ್ಮಕ ನಿಯಂತ್ರಣಕ್ಕೆ ಒಳಪಟ್ಟಿದ್ದು, ಅಬಕಾರಿ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ಜಾರಿ ಮತ್ತು ತನಿಖಾ ಕಾರ್ಯ ನಿರ್ವಹಿಸಲು ಸಹಕರಿಸುತ್ತಿರುತ್ತಾರೆ.

### 1.5.3. ಜಾರಿ ಮತ್ತು ತನಿಖಾ ವಿಭಾಗಗಳು :

ಮುಂದುವರೆದಂತೆ, ಇಲಾಖೆಯ ಆಡಳಿತಾತ್ಮಕ ಕಾರ್ಯಕ್ಷಮತೆ ಹೆಚ್ಚಿಸಲು ಹಾಗೂ ಜಾರಿ ಮತ್ತು ತನಿಖೆ ಕೆಲಸ ನಿರ್ವಹಣೆಯನ್ನು ಚುರುಕುಗೊಳಿಸಲು ರಾಜ್ಯವನ್ನು 6 ವಿಭಾಗಗಳನ್ನಾಗಿ ವಿಂಗಡಿಸಿದೆ. ಪ್ರತಿಯೊಂದು ವಿಭಾಗವು ಅಬಕಾರಿ ಜಂಟಿ ಆಯುಕ್ತರವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಪ್ರತಿ ವಿಭಾಗದ ಅಧಿಕಾರ ವ್ಯಾಪ್ತಿ ಈ ಕೆಳಕಂಡಂತಿದೆ.

| ಕ್ರ.ಸಂ. | ವಿಭಾಗಗಳು | ವ್ಯಾಪ್ತಿಗೊಳಪಡುವ ಜಿಲ್ಲೆಗಳು |
|---|---|---|
| 1 | ಬೆಂಗಳೂರು ವಿಭಾಗ | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು. |
| 2 | ಬೆಳಗಾವಿ ವಿಭಾಗ | ಬೆಳಗಾವಿ, ಬಿಜಾಪೂರ, ಬಾಗಲಕೋಟೆ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳು. |
| 3 | ಗುಲ್ಬರ್ಗಾ ವಿಭಾಗ | ಗುಲ್ಬರ್ಗಾ, ರಾಯಚೂರು ಮತ್ತು ಬೀದರ್, ಯಾದಗಿರಿ ಜಿಲ್ಲೆಗಳು. |
| 4 | ಹೊಸಪೇಟೆ ವಿಭಾಗ | ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಕೊಪ್ಪಳ ಮತ್ತು ಗದಗ ಜಿಲ್ಲೆಗಳು. |
| 5 | ಮಂಗಳೂರು ವಿಭಾಗ | ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳು. |
| 6 | ಮೈಸೂರು ವಿಭಾಗ | ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು. |

**1.5.4** ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಓರ್ವ ಅಬಕಾರಿ ಉಪ ಆಯುಕ್ತರು ಕಾರ್ಯನಿರ್ವಹಿಸುತ್ತಿದ್ದು, ಸದರಿ ಅಧಿಕಾರಿಯವರು, ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಕರ್ನಾಟಕ ಅಬಕಾರಿ ಕಾಯ್ದೆ 1965 ಮತ್ತು ಇತರೆ ಶಾಸನಬದ್ಧ ಕಾಯ್ದೆಗಳು ಹಾಗೂ ನಿಯಮಗಳಡಿಯಲ್ಲಿ ಅಬಕಾರಿ ಉಪ ಆಯುಕ್ತರು ಶಾಸನಬದ್ಧ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಜಿಲ್ಲೆಗಳಲ್ಲಿನ ಜಾರಿ ತನಿಖಾ ಕಾರ್ಯ ಚಟುವಟಿಕೆಗಳು ಅಬಕಾರಿ ಉಪ ಆಯುಕ್ತರ ಜವಾಬ್ದಾರಿಯಾಗಿರುತ್ತದೆ. ರಾಜ್ಯದ ಬೆಂಗಳೂರು ನಗರ ಜಿಲ್ಲೆಯ 4 ಅಬಕಾರಿ ಜಿಲ್ಲೆಗಳನ್ನೊಳಗೊಂಡಂತೆ ಒಟ್ಟು 33 ಅಬಕಾರಿ ಜಿಲ್ಲೆಗಳಿದ್ದು ಪ್ರತಿ ಜಿಲ್ಲೆಗೆ ಒಬ್ಬ ಅಬಕಾರಿ ಉಪ ಆಯುಕ್ತರು ಇರುತ್ತಾರೆ. ಕೇಂದ್ರ ಕಛೇರಿಯಲ್ಲಿ ಒಂದು ಹುದ್ದೆ ಇದ್ದು, ಒಟ್ಟು 34 ಅಬಕಾರಿ ಉಪ ಆಯುಕ್ತರ ಹುದ್ದೆಗಳು ಕಾರ್ಯನಿರ್ವಹಿಸುತ್ತಿವೆ.

**1.5.5.** ಅಬಕಾರಿ ಅಧೀಕ್ಷಕರುಗಳು, ಅಬಕಾರಿ ಉಪ ಅಧೀಕ್ಷಕರುಗಳು, ಅಬಕಾರಿ ನಿರೀಕ್ಷಕರುಗಳು, ಅಬಕಾರಿ ಉಪ ನಿರೀಕ್ಷಕರುಗಳು, ಹಿರಿಯ ರಕ್ಷಕರು ಮತ್ತು ರಕ್ಷಕರು ಇಲಾಖೆಯ ಜಾರಿ ಮತ್ತು ತನಿಖಾ ಚಟುವಟಿಕೆ ನಡೆಸುವ ಹುದ್ದೆಗಳಾಗಿರುತ್ತವೆ. ಅಬಕಾರಿ ಇಲಾಖೆಯಲ್ಲಿ 63 ಉಪ ವಿಭಾಗಗಳು ಅಬಕಾರಿ ಉಪ ಅಧೀಕ್ಷಕರ ಮುಖ್ಯಸ್ಥಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ. ಸದರಿ ಅಬಕಾರಿ ಉಪ ಅಧೀಕ್ಷಕರುಗಳು ಜಿಲ್ಲೆಯ ಅಬಕಾರಿ ಉಪ ಆಯುಕ್ತರ ಆಡಳಿತ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಅಬಕಾರಿ ಅಧೀಕ್ಷಕರುಗಳು/ಅಬಕಾರಿ ಉಪ ಅಧೀಕ್ಷಕರುಗಳು/ ಅಬಕಾರಿ ನಿರೀಕ್ಷಕರ ವೃಂದಗಳಲ್ಲಿನ ಅಧಿಕಾರಿಗಳಿಗೆ ಡಿಸ್ಟಿಲರೀಸ್, ಬಿವರೀಸ್ ಮತ್ತು ವೈನರೀಸ್ ಕಛೇರಿಗಳಲ್ಲಿ ವ್ಯವಹಾರಗಳ ಮೇಲ್ವಿಚಾರಣೆ ನೋಡಲು ಮತ್ತು ಅಬಕಾರಿ ಕಾನೂನನ್ನು ಜಾರಿಗೊಳಿಸಲು ತೈನಾತಿಸಲ್ಪಟ್ಟ ಇತರೆ ಸಿಬ್ಬಂದಿಗಳು ಸಹಕರಿಸುತ್ತಾರೆ. ಅಬಕಾರಿ ಇಲಾಖೆಯು ಮುಖ್ಯ ರಾಸಾಯನಿಕ ತಜ್ಞರ ಮುಖ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಕೇಂದ್ರ ರಾಸಾಯನಿಕ ಪ್ರಯೋಗಾಲಯವನ್ನೂ ಸಹ ಹೊಂದಿದೆ.

**1.5.6 ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ ಮೂಲಕ ಸಗಟು ಮದ್ಯ ವಿತರಣೆ.**

ಸಗಟು ಮದ್ಯ ವಿತರಣೆಯನ್ನು ವ್ಯವಸ್ಥಿತಗೊಳಿಸುವ ಹಾಗೂ ಮದ್ಯ ವಹಿವಾಟಿನಲ್ಲಿನ ಅಕ್ರಮ ದಂಧೆಯನ್ನು ತಡೆಗಟ್ಟುವ ಉದ್ದೇಶದಿಂದ 2003 ರಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವನ್ನು ಸಗಟು ವಹಿವಾಟಿನ ಏಕೈಕ ಸಂಸ್ಥೆಯಾಗಿ ಸ್ಥಾಪಿಸಲಾಗಿರುತ್ತದೆ. ಈ ನಿಗಮವು ರಾಜ್ಯಾದ್ಯಂತ ಒಟ್ಟು 68 ಮದ್ಯ ವಿತರಣಾ ಘಟಕಗಳು ಮತ್ತು 33 ಮದ್ಯಸಾರ ಘಟಕಗಳನ್ನು ಹೊಂದಿರುತ್ತದೆ.

## ಅಧ್ಯಾಯ – 2
## ಇಲಾಖೆಯ ಸಾಧನೆಗಳು :

**2.1 ಆರ್ಥಿಕ :**

ಅಬಕಾರಿ ರಾಜಸ್ವವು ಪ್ರಮುಖವಾಗಿ ಈ ಕೆಳಕಂಡ ಮೂಲಗಳಿಂದ ಸಂಗ್ರಹವಾಗುತ್ತದೆ.

1. ಐಎಂಎಲ್ ಮತ್ತು ಬೀರ್ ಮೇಲಿನ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕ.
2. ಡಿಸ್ಟಿಲರಿ, ಬ್ರೀವರಿ ಮತ್ತು ವೈನ್ ತಯಾರಿಕಾ ಘಟಕಗಳು ಮತ್ತು ಎಲ್ಲಾ ವಿಧದ ಮದ್ಯ ಮಾರಾಟದ ಸನ್ನದುಗಳ ಸನ್ನದು ಶುಲ್ಕ.
3. ಅಪರಾಧ ಮೊಕದ್ದಮೆಗಳ ದಂಡ ವಿಧಿಸಿ ಇತ್ಯರ್ಥ್ಯ ಮಾಡುವುದರಿಂದ ಮತ್ತು ಮುಟ್ಟುಗೋಲು ಹಾಕಿಕೊಂಡ ವಸ್ತುಗಳ ವಿಲೇವಾರಿಯಿಂದ ಸಂಗ್ರಹವಾಗುವ ಹಣ.
5. ಇತರೆ.

ಅಬಕಾರಿ ರಾಜಸ್ವ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. 1967-68 ರ ಆರ್ಥಿಕ ವರ್ಷದಲ್ಲಿ ರೂ. 7.11 ಕೋಟಿ ಇದ್ದ ರಾಜಸ್ವವು 2015-16 ನೇ ಸಾಲಿಗೆ ರೂ. 15,332.88 ಕೋಟಿಗಳಿಗೆ ಏರಿಕೆಯಾಗಿರುತ್ತದೆ. 2016-17 ನೇ ಸಾಲಿನಲ್ಲಿ ರೂ. 16,483.75 ಕೋಟಿಗಳಷ್ಟು ರಾಜಸ್ವ ಸಂಗ್ರಹಣೆಯಾಗಿದ್ದು, ಕಳೆದ ಸಾಲಿಗೆ ಹೋಲಿಸಿದರೆ ರೂ. 1,150.87 ಕೋಟಿಗಳ ಹೆಚ್ಚಿನ ರಾಜಸ್ವ ಸಂಗ್ರಹಣೆಯಾಗಿದ್ದು, ಶೇಕಡಾ 7.51 ರಷ್ಟು ಹೆಚ್ಚಳ ಆಗಿರುತ್ತದೆ. ಇಲಾಖೆಯ ಸಂಬಳ ಹಾಗೂ ಸಂಬಳೇತರ ಬಾಬುಗಳಿಗೆ ರೂ. 146.25 ಕೋಟಿ ವೆಚ್ಚವಾಗಿದ್ದು, ಇದು ಆದಾಯದ ಶೇಕಡಾ 0.89 ರಷ್ಟು ಮಾತ್ರವಾಗಿದೆ.

2014-15 ರಿಂದ 2016-17ನೇ ನೇ ಸಾಲಿನವರೆವಿಗೆ ಅಬಕಾರಿ ರಾಜಸ್ವದ ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ. ಕೋಟಿಗಳಲ್ಲಿ)

| ಕ್ರ.ಸಂ. | ಮದ್ಯದ ವಿವರಗಳು | 2014-15 | 2015-16 | 2016-17 (ತಾತ್ಕಾಲಿಕ) |
|---|---|---|---|---|
| 1. | ಭಾ.ತ.ಮ | 11,651.40 | 12,928.51 | 13,931.71 |
| 2. | ಬೀರ್ | 1,570.64 | 1,792.71 | 1,872.69 |
| 3. | ಇತರೆ | 579.15 | 611.66 | 679.35 |
| **ಒಟ್ಟು** | | **13,801.19** | **15,332.88** | **16,483.75** |

**2.2 ವೆಚ್ಚ :**

2014-15ನೇ ಸಾಲಿನಿಂದ 2016-17ನೇ ಸಾಲಿನವರೆಗೆ ರಾಜಸ್ವ ಸಂಗ್ರಹಣೆ ಮತ್ತು ಅಧಿಕಾರಿ/ನೌಕರರ ಸಂಬಳ ಹಾಗೂ ಇತರೆ ಬಾಬ್ತುಗಳಲ್ಲಿನ ಒಟ್ಟು ವೆಚ್ಚದ ವಿವರಗಳು ಈ ಕೆಳಕಂಡಂತಿರುತ್ತದೆ.

(ಕೋಟಿ ರೂ.ಗಳಲ್ಲಿ)

| ವಿವರಗಳು | 2014-15 | 2015-16 | 2016-17 |
|---|---|---|---|
| ಅಬಕಾರಿ ರಾಜಸ್ವ ಸಂಗ್ರಹಣೆ | 13,801.19 | 15,332.88 | 16,483.75 |
| ಒಟ್ಟು ವೆಚ್ಚ | 130.14 | 132.61 | 146.25 |
| **ಶೇಕಡವಾರು ವೆಚ್ಚ** | **0.94%** | **0.86%** | **0.89%** |

**2.3 ಭೌತಿಕ**

**2.3.1 ಕಾಕಂಬಿ, ಮದ್ಯಸಾರ, ಐಎಂಎಲ್, ಬೀರ್ ಮತ್ತು ವೈನ್ ನ ಉತ್ಪಾದನೆ:-**

2014-15 ರಿಂದ 2016-17ನೇ ಸಾಲಿನವರೆಗೆ ಕಾಕಂಬಿ, ಮದ್ಯಸಾರ, ಐ.ಎಂ.ಎಲ್, ಬೀರ್ ಮತ್ತು ವೈನ್ ಉತ್ಪಾದನೆಯ ವಿವರಗಳು ಈ ಕೆಳಕಂಡಂತಿವೆ.

(ಲಕ್ಷ ಬಲ್ಕ್ ಲೀ. ಗಳಲ್ಲಿ)

| ಕ್ರ.ಸಂ. | ವಿವರ | 2014-15 | 2015-16 | 2016-17 |
|---|---|---|---|---|
| 1 | ಕಾಕಂಬಿ (ಲಕ್ಷ ಮೆಟ್ರಿಕ್ ಟನ್) | 17.44 | 18.93 | 10.96 |
| 2 | ಮದ್ಯಸಾರ | 4,071.47 | 5,124.48 | 3,642.11 |
| 3 | ಐ.ಎಂ.ಎಲ್. | 4,950.98 | 5,183.36 | 5,205.71 |
| 4 | ಬೀರ್ | 1,881.91 | 2,147.36 | 1,971.53 |
| 5 | ವೈನ್ | 63.16 | 95.24 | 63.26 |

**2.3.2 ಐಎಂಎಲ್ ಮತ್ತು ಬೀರ್ ಮಾರಾಟ**

2014-15 ರಿಂದ 2016-17ನೇ ಸಾಲಿನವರೆಗೆ ಐ.ಎಂ.ಎಲ್. ಮತ್ತು ಬೀರ್ ಮಾರಾಟದ ವಿವರಗಳು ಈ ಕೆಳಕಂಡಂತಿದೆ.

(ಲಕ್ಷ ಪೆಟ್ಟಿಗೆಗಳಲ್ಲಿ)

| ಕ್ರ.ಸಂ. | ವಿವರ | 2014-15 | 2015-16 | 2016-17 |
|---|---|---|---|---|
| 1 | ಐ.ಎಂ.ಎಲ್. | 559.90 | 566.79 | 558.57 |
| | **ತಿಂಗಳ ಸರಾಸರಿ** | **46.66** | **47.23** | **46.55** |
| 2 | ಬೀರ್ | 253.46 | 270.58 | 244.22 |
| | **ತಿಂಗಳ ಸರಾಸರಿ** | **21.12** | **22.55** | **20.35** |

**2.3.3. ಅಪರಾಧ ಮತ್ತು ಜಾರಿ**

ಪ್ರಸ್ತುತ ವರ್ಷದಲ್ಲಿ ಅಬಕಾರಿ ನಿಯಮಗಳ ಉಲ್ಲಂಘನೆ ತಡೆಗಟ್ಟಲು ಇಲಾಖೆಯ ಅಧಿಕಾರಿಗಳು ಒಟ್ಟು 69,692 ದಾಳಿಗಳನ್ನು ನಡೆಸಿ 36,085 ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಈ ಸಂದರ್ಭದಲ್ಲಿ 18,331 ಆರೋಪಿಗಳನ್ನು ಬಂಧಿಸಿರುವುದಲ್ಲದೆ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದ 584 ವಾಹನಗಳನ್ನು ಜಪ್ತು ಮಾಡಲಾಗಿರುತ್ತದೆ. ದಾಳಿ ಸಮಯದಲ್ಲಿ ವಶಪಡಿಸಿಕೊಳ್ಳಲಾದ ಅಬಕಾರಿ ವಸ್ತುಗಳ ವಿವರ ಈ ಕೆಳಕಂಡಂತಿವೆ.

| ಕ್ರ.ಸಂ. | ವಸ್ತುಗಳು | ಪ್ರಮಾಣ (ಲೀ.ಗಳಲ್ಲಿ) |
|---|---|---|
| 1. | ಐಎಂಎಲ್ | 74,481 |
| 2. | ಬೀರ್ : ಸೇಂದಿ : ಫೆನ್ನಿ | 38,227 |
| 3. | ಮದ್ಯಸಾರ : ಆರ್.ಎಸ್ : ಎನ್ಎಸ್ : ಡಿ.ಎಸ್ | 59,907 |
| 4. | ನಾಶಪಡಿಸಿದ ಕಳ್ಳಭಟ್ಟಿ | 9,478 |
| 5. | ವಶಪಡಿಸಿಕೊಂಡು ನಾಶಪಡಿಸಿದ ಬೆಲ್ಲದ ಕೊಳೆ | 28,912 |

**2.3.4. ಡಿಸ್ಟಿಲರಿ, ಬ್ರೀವರಿ ಹಾಗೂ ವೈನರಿ ಘಟಕಗಳು :-**

2016-17 ನೇ ಅಬಕಾರಿ ಸಾಲಿಗೆ ನವೀಕರಿಸಲಾದ ಡಿಸ್ಟಿಲರಿ, ಬ್ರೀವರಿ ಹಾಗೂ ವೈನರಿ ಘಟಕಗಳ ಸಂಖ್ಯೆ ಈ ಕೆಳಕಂಡಂತಿದೆ.

| ಕ್ರ.ಸಂ. | ಘಟಕ | ಒಟ್ಟು ಘಟಕಗಳ ಸಂಖ್ಯೆ |
|---|---|---|
| 1. | ಪ್ರಾಥಮಿಕ ಘಟಕಗಳು (ಮದ್ಯಸಾರ ತಯಾರಿಕಾ ಘಟಕಗಳು) | 26 |
| 2. | ಸಂಯುಕ್ತ ಡಿಸ್ಟಿಲರಿಗಳು (ಮದ್ಯಸಾರ ಮತ್ತು ಐಎಂಎಲ್ ತಯಾರಿಕಾ ಘಟಕಗಳು) | 07 |
| 3. | ಐಎಂಎಲ್ ತಯಾರಿಕಾ ಘಟಕಗಳು | 25 |
| 4. | ಬ್ರೀವರಿಗಳು | 07 |
| 5 | ವೈನರಿಗಳು<br>ಅ) ಫೋರ್ಟಿಫೈಡ್ ವೈನ್<br>ಆ) ಫ್ರೂಟ್ ವೈನ್<br>ಇ) ಫೋರ್ಟಿಫೈಡ್ ವೈನ್ ಮತ್ತು ಫ್ರೂಟ್ ವೈನ್ (ಎರಡು ಸೇರಿ) | <br>04<br>17<br>07 |
| 6. | ಮೈಕ್ರೋಬ್ರೀವರಿ | 28 |
| ಒಟ್ಟು | | 113 |

**2.3.5 ಮದ್ಯ ಮಾರಾಟ ಸನ್ನದುಗಳು :-**

ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ನಿಯಮಗಳ 1968 ರಂತೆ ಮಂಜೂರು ಮಾಡಲಾದ ವಿವಿಧ ರೀತಿಯ ಮದ್ಯ ಮಾರಾಟ ಸನ್ನದುಗಳ ಸಂಖ್ಯೆ ಈ ಕೆಳಕಂಡಂತಿದೆ :

| ಕ್ರ.ಸಂ | ಸನ್ನದುಗಳ ವಿವರ | 2014-15 | 2015-16 | 2016-17 |
|---|---|---|---|---|
| 1. | ಸಿ.ಎಲ್-2 (ಚಿಲ್ಲರೆ ಅಂಗಡಿಗಳು) | 3,938 | 3,950 | 3,953 |
| 2. | ಸಿ.ಎಲ್-4 (ಕ್ಲಬ್‌ಗಳು) | 214 | 218 | 219 |
| 3. | ಸಿಎಲ್-6ಎ (ಸ್ಟಾರ್ ಹೋಟೆಲ್‌ಗಳು) | 63 | 63 | 68 |
| 4. | ಸಿ.ಎಲ್-7 (ಹೋಟೆಲ್ ಮತ್ತು ವಸತಿಗೃಹ) | 838 | 932 | 1,008 |
| 5. | ಸಿ.ಎಲ್-9 (ಬಾರ್ ಮತ್ತು ರೆಸ್ಟೋರೆಂಟ್) | 3,574 | 3,592 | 3,589 |
| 6. | ಸಿಎಲ್-11ಸಿ (ಎಂ.ಎಸ್.ಐ.ಎಲ್. ಮದ್ಯ ಮಾರಾಟ ಮಳಿಗೆಗಳು) | 400 | 399 | 406 |
| 7. | ಆರ್.ವಿ.ಬಿ. (ರಿಟೈಲ್ ವೆಂಡ್ ಆಫ್ ಬಿಯರ್) | 329 | 375 | 411 |
| 8. | ಇತರೆ | 410 | 472 | 511 |
| **ಒಟ್ಟು** | | **9,766** | **10,001** | **10,165** |

**2.3.6 ವೈದ್ಯಕೀಯ ಮತ್ತು ಪ್ರಸಾಧನ ಸಾಮಗ್ರಿಗಳ ತಯಾರಿಕೆ :**

ಕೇಂದ್ರ ಕಾಯ್ದೆಯಾದ ಮೆಡಿಸಿನಲ್ ಅಂಡ್ ಟಾಯ್ಲೆಟ್ ಪ್ರಿಪರೇಷನ್ಸ್ (ಎಕ್ಸೈಜ್ ಡ್ಯೂಟೀಸ್) ಕಾಯ್ದೆಯಡಿಯಲ್ಲಿ ಔಷಧೀಯ ಮತ್ತು ಸೌಂದರ್ಯವರ್ಧಕಗಳ ಉತ್ಪನ್ನಗಳ ತಯಾರಿಕೆಗಾಗಿ ಎಲ್-1 ಮತ್ತು ಎಲ್-2 ಸನ್ನದುಗಳನ್ನು ನೀಡಲಾಗುತ್ತವೆ. ಈ ಉತ್ಪನ್ನಗಳಲ್ಲಿ ಮದ್ಯಸಾರ, ಅಫೀಮ್, ಇಂಡಿಯನ್ ಹೆಂಪ್ ಮತ್ತು ಇತರೇ ಮಾದಕ ಔಷಧಿಗಳ ಬಳಕೆ ಇರುತ್ತದೆ. 2016-17ನೇ ಸಾಲಿನಲ್ಲಿ 08 ಎಲ್-1 ಮತ್ತು 06 ಎಲ್-2 ಸನ್ನದುಗಳು ಮಂಜೂರಾಗಿರುತ್ತವೆ.

**2.3.7 ಮದ್ಯಸಾರ ಆಧಾರಿತ ರಾಸಾಯನಿಕ ಕೈಗಾರಿಕೆಗಳು:**

2016-17ನೇ ಸಾಲಿನಲ್ಲಿ 472 ಆರ್ ಎಸ್-2, 98 ಡಿ.ಎಲ್-3, 1 ಡಿ.ಎಲ್-5, 1 ಡಿ.ಎಲ್-6 ಮತ್ತು 2 ಡಿ.ಎಲ್-9 ಸನ್ನದುಗಳನ್ನು ನೀಡಲಾಗಿದೆ.

**2.3.8 ಸೇಂದಿ**

ಸೇಂದಿ ಉತಾರುದಾರರ ಸಹಕಾರ ಸಂಘಗಳ ಮೂಲಕ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಸೇಂದಿ ಮಾರಾಟ ಮಾಡಲು ಅನುಮತಿ ನೀಡಲಾಗಿರುತ್ತದೆ. ಇದರಿಂದ ಸಂಗ್ರಹವಾಗುವ ರಾಜ್ಯಸ್ವವು ಒಟ್ಟು ರಾಜ್ಯಸ್ವಕ್ಕೆ ಹೋಲಿಸಿದರೆ ಗೌಣವಾಗಿದೆ.

**2.3.9 ಎಂಎಸ್ಐಎಲ್ ಸಂಸ್ಥೆಯ ಮೂಲಕ ಮದ್ಯ ಮಾರಾಟ:-**

ಮದ್ಯ ಮಾರಾಟದಲ್ಲಿ ಎಂ.ಆರ್.ಪಿ ಉಲ್ಲಂಘನೆ ಪ್ರಕರಣಗಳನ್ನು ಹತೋಟಿಗೆ ತರುವ ದೃಷ್ಟಿಯಿಂದ ಸರ್ಕಾರವು ಮೊದಲನೆ ಹಂತವಾಗಿ 463 ಸಿ.ಎಲ್ 11-ಸಿ ಸನ್ನದುಗಳನ್ನು ಎಂಎಸ್ಐಎಲ್ ಸಂಸ್ಥೆಯವರಿಗೆ ಹಂಚಿಕೆ ಮಾಡಿದ್ದು, ಅದರಲ್ಲಿ 415 ಸನ್ನದುಗಳನ್ನು ಆರಂಭಿಸಲಾಗಿರುತ್ತದೆ. ಎರಡನೇ ಹಂತದಲ್ಲಿ ಎಂಎಸ್ಐಎಲ್ ಸಂಸ್ಥೆಯವರಿಗೆ 900 ಸಿ.ಎಲ್ 11-ಸಿ ಸನ್ನದು ತೆರೆಯಲು ಸರ್ಕಾರದಿಂದ ಹಂಚಿಕೆಯಾಗಿರುತ್ತದೆ.

## ಅಧ್ಯಾಯ - 3

**ಸಾರ್ವಜನಿಕ ಉದ್ದಿಮೆಗಳು, ಸೊಸೈಟಿಗಳು ಮತ್ತು ವಿಶೇಷ ಉದ್ದೇಶಿತ ವಾಹನಗಳ ಸಾಧನೆ**

– ಅಬಕಾರಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ –

## ಅಧ್ಯಾಯ -4

**ತಿದ್ದುಪಡಿ ಮತ್ತು ನೂತನ ಶಾಸನ ಕ್ರಮಗಳು**

**4.1 ತಿದ್ದುಪಡಿಗಳು :**

1. ಸರ್ಕಾರದ ಅಧಿಸೂಚನೆ ಸಂಖ್ಯೆ: FD 10 PES 2016 ದಿನಾಂಕ: 30.03.2016 ರಂತೆ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ಕ್ಕೆ ತಿದ್ದುಪಡಿ ತಂದು ರೆಕ್ಟಿಫೈಡ್ ಸ್ಪಿರಿಟ್ (ಡಿನೇಚರ್ಡ್ ಅನ್‌ಹೈಡ್ರಸ್ ಎಥನಾಲ್ ಹೊರತುಪಡಿಸಿ) ರಫ್ತಿನ ಮೇಲೆ ಪ್ರತಿ ಲೀಟರ್‌ಗೆ ರೂ.2 ರಂತೆ ಮತ್ತು ಆಮದಿನ ಮೇಲೆ ಪ್ರತಿ ಲೀಟರ್‌ಗೆ ರೂ. 1 ರಂತೆ ಆಡಳಿತಾತ್ಮಕ ಶುಲ್ಕವನ್ನು ವಿಧಿಸಲಾಗಿದೆ ಮತ್ತು ಮದ್ಯ ಮತ್ತು ಬಿಯರ್ ಮೇಲಿನ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಿಸಲಾಗಿದೆ.
2. ಸರ್ಕಾರದ ಅಧಿಸೂಚನೆ ಸಂಖ್ಯೆ: FD 02 PES 2015 ದಿನಾಂಕ: 15.04.2016 ರಂತೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ಕ್ಕೆ ತಿದ್ದುಪಡಿ ತಂದು ಸಿಎಲ್-4 ಸನ್ನದಿನಲ್ಲಿ ಗರಿಷ್ಠ ನಾಲ್ಕು ಹೆಚ್ಚುವರಿ ಕೌಂಟರ್‌ಗಳವರೆಗೆ ಅವಕಾಶ ಕಲ್ಪಿಸಲಾಗಿದೆ.

3. ಸರ್ಕಾರದ ಅಧಿಸೂಚನೆ ಸಂಖ್ಯೆ: FD 03 PES 2015 ದಿನಾಂಕ: 28.05.2016 ರಂತೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3, 4, 8, ಸಿಎಲ್-ಎ1 ನಮೂನೆ, ಸಿಎಲ್-2, ಸಿಎಲ್-4, ಸಿಎಲ್-5, ಸಿಎಲ್-6, ಸಿಎಲ್-6ಎ, ಸಿಎಲ್-7 ಮತ್ತು ಸಿಎಲ್-9 ಸನ್ನದು ನಮೂನೆಗಳಿಗೆ ತಿದ್ದುಪಡಿ ತರಲಾಗಿದೆ.

4. ಸರ್ಕಾರದ ಅಧಿಸೂಚನೆ ಸಂಖ್ಯೆ: FD 11 PES 2016 ದಿನಾಂಕ: 23.06.2016 ರಂತೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ಕ್ಕೆ ತಿದ್ದುಪಡಿ ತಂದು ಮದ್ಯದ ಮಾರಾಟದ ಸನ್ನದು ಶುಲ್ಕಗಳನ್ನು ಹೆಚ್ಚಿಸಲಾಗಿದೆ.

5. ಸರ್ಕಾರದ ಅಧಿಸೂಚನೆ ಸಂಖ್ಯೆ: FD 16 PES 2016 ದಿನಾಂಕ: 30.06.2016 ರಂತೆ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ಕ್ಕೆ ತಿದ್ದುಪಡಿ ತಂದು ಮದ್ಯದ ಎಲ್ಲಾ 17 ಸ್ಲ್ಯಾಬ್‌ಗಳ ಘೋಷಿತ ಬೆಲೆಯನ್ನು ತಲಾ ರೂ.35 ಗಳಂತೆ ಹೆಚ್ಚಿಸಲಾಗಿದೆ.

6. ಸರ್ಕಾರದ ಅಧಿಸೂಚನೆ ಸಂಖ್ಯೆ: FD 12 PES 2015 ದಿನಾಂಕ: 30.06.2016 ರಂತೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 9-ಬಿ ಗೆ ತಿದ್ದುಪಡಿ ತಂದು ಹೊರ ರಾಜ್ಯದಲ್ಲಿ ತಯಾರಿಸಲ್ಪಟ್ಟು ಆಮದಾದ ಪ್ರತಿ ವೈನ್ ಬ್ರಾಂಡ್‌ನ ಲೇಬಲ್ ಅನುಮೋದನಾ ಶುಲ್ಕವನ್ನು ರೂ.25,000 ಗಳಿಂದ ರೂ.10,000 ಗಳಿಗೆ ಬದಲಾಯಿಸಲಾಗಿದೆ.

7. ಫೋರ್ಟಿಫೈಡ್ ವೈನ್‌ನ ದುರ್ಬಳಕೆಯನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರದ Notification-I and Notification –II: FD 12 PES 2016 (Part -1) ದಿನಾಂಕ: 27.07.2016 ರಂತೆ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ಫೋರ್ಟಿಫೈಡ್ ವೈನ್ ತಯಾರಿಕೆ) ನಿಯಮಗಳು, 1968 ಮತ್ತು ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ಕ್ಕೆ ತಿದ್ದುಪಡಿ ತರಲಾಗಿದೆ.

8. ಸರ್ಕಾರದ ಅಧಿಸೂಚನೆ ಸಂಖ್ಯೆ: FD 06 PES 2015 ದಿನಾಂಕ: 23.07.2016 ರಂತೆ ಕರ್ನಾಟಕ ಅಬಕಾರಿ (ಮದ್ಯಸಾರ, ಬಿಯರ್, ವೈನ್ ಅಥವಾ ಮದ್ಯಗಳ ಉತ್ಪತ್ತಿ, ತಯಾರಿಕೆ ಮತ್ತು ಅಪವ್ಯಯದ ನಿಯಂತ್ರಣ) ನಿಯಮಗಳು, 1998 ರ ಅನುಸೂಚಿ 'ಬಿ' ಗೆ ತಿದ್ದುಪಡಿ ತಂದು ಮರದ ಪೀಪಾಯಿಗಳಲ್ಲಿ ಮದ್ಯಸಾರವನ್ನು ಪರಿಪಕ್ವಗೊಳಿಸುವ ಅವಧಿ ಮತ್ತು ಆಗಬಹುದಾಗ ನಷ್ಟದ ಪ್ರಮಾಣವನ್ನು ಮರುನಿಗದಿಗೊಳಿಸಲಾಗಿದೆ.

9. ಸರ್ಕಾರದ ಅಧಿಸೂಚನೆ ಸಂಖ್ಯೆ: FD 17 PES 2015 ದಿನಾಂಕ: 04.11.2016 ರಂತೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 8, ಸಿಎಲ್-2, ಸಿಎಲ್-8 ಮತ್ತು ಸಿಎಲ್-9 ಸನ್ನದು ನಮೂನೆಗಳಿಗೆ ತಿದ್ದುಪಡಿ ತರಲಾಗಿದೆ.

10. ಸರ್ಕಾರದ ಅಧಿಸೂಚನೆ ಸಂಖ್ಯೆ: FD 16 PES 2015 ದಿನಾಂಕ: 04.11.2016 ರಂತೆ ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 1, 3, 4-ಎ, 5, 10-ಬಿ ಮತ್ತು 14 ಕ್ಕೆ ತಿದ್ದುಪಡಿ ತರಲಾಗಿದೆ.

11. ಸರ್ಕಾರದ ಅಧಿಸೂಚನೆಗಳ ಸಂಖ್ಯೆ: FD 07 PES 2016 ದಿನಾಂಕ: 06.12.2016 (Notification I, II and III) ರಂತೆ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, 1967, ಕರ್ನಾಟಕ ಅಬಕಾರಿ (ಡಿಎಸ್ ಮತ್ತು ಡಿಎಸ್‌ಪಿ) ನಿಯಮಗಳು, 1967 ಮತ್ತು ಕರ್ನಾಟಕ ಅಬಕಾರಿ (ರೆಕ್ಟಿಫೈಡ್ ಸ್ಪಿರಿಟ್) ನಿಯಮಗಳು, 1967 ಕ್ಕೆ ತಿದ್ದುಪಡಿ ಕೇಂದ್ರ ಸರ್ಕಾರಿ ಸ್ವಾಮ್ಯದ ಪೆಟ್ರೋಲಿಯಂ ಕಂಪನಿಗಳಿಗೆ ಸರಬರಾಜಾಗುತ್ತಿರುವ ಎಥನಾಲ್ ಮತ್ತು ಹೊರ ದೇಶಗಳಿಗೆ ರಫ್ತು ಮಾಡುವ ಡಿನೇಚರ್ಡ್ ಸ್ಪಿರಿಟ್ ಮತ್ತು ರೆಕ್ಟಿಫೈಡ್ ಸ್ಪಿರಿಟ್ ವ್ಯವಹಾರವನ್ನು ಸರಳೀಕರಣಗೊಳಿಸಲಾಗಿದೆ.

12. ತೋಟಗಾರಿಕೆ ಇಲಾಖೆಯು 'ತೆಂಗು ನೀರಾ ನೀತಿ-2016'ನ್ನು ದಿನಾಂಕ: 06-12-2016 ರಲ್ಲಿ ಜಾರಿಗೆ ತಂದಿದೆ. ಇದಕ್ಕೆ ಪೂರಕವಾಗಿ ನೀರಾ ಉತ್ಪಾದನೆ ಮತ್ತು ಮೌಲ್ಯವರ್ಧನೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ನೀರಾ ಯೋಜನೆಯನ್ನು ಜಾರಿಗೆ ತಂದು ತೆಂಗು ಬೆಳೆಗಾರರ ಶ್ರೇಯೋಭಿವೃದ್ಧಿಗಾಗಿ ಅವಕಾಶ ಕಲ್ಪಿಸುವ ಸಲುವಾಗಿ ಹಾಗೂ ನೀರಾ ಇಳಿಸುವಿಕೆಯನ್ನು ನಿಯಂತ್ರಿಸಲು ಸಂಸದೀಯ ವ್ಯವಹಾರಗಳ ಇಲಾಖೆ ಅಧಿಸೂಚನೆ ಸಂಖ್ಯೆ: ಡಿಪಿಎಎಲ್/53/ಶಾಸನ/2016, ದಿನಾಂಕ: 04-01-2017ರಂತೆ ಕರ್ನಾಟಕ ಅಬಕಾರಿ ಕಾಯ್ದೆ, 1965 ರ ಕಲಂ 2 ಮತ್ತು 32 ಕ್ಕೆ ತಿದ್ದುಪಡಿ ಮತ್ತು ಕಲಂ 13ಎ ಅನ್ನು ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ.

13. ಸರ್ಕಾರದ ಅಧಿಸೂಚನೆ ಸಂಖ್ಯೆ: FD 07 PES 2017 ದಿನಾಂಕ: 30.03.2017 ರಂತೆ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ಕ್ಕೆ ತಿದ್ದುಪಡಿ ತಂದು ಸ್ಪಿರಿಟ್ (ಎಥನಾಲ್ ಹೊರತುಪಡಿಸಿ) ರಫ್ತಿನ ಮೇಲೆ ಪ್ರತಿ ಲೀಟರ್‌ಗೆ ರೂ.2 ರಂತೆ ಮತ್ತು ಆಮದಿನ ಮೇಲೆ ಪ್ರತಿ ಲೀಟರ್‌ಗೆ ರೂ. 1 ರಂತೆ ವಿಧಿಸಲಾಗಿದ್ದ ಆಡಳಿತಾತ್ಮಕ ಶುಲ್ಕವನ್ನು ಹಿಂಪಡೆಯಲಾಗಿದೆ ಮತ್ತು ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಿಸಲಾಗಿದೆ.

**4.2 ವರದಿಗಳು ಮತ್ತು ಪ್ರಕಟಣೆಗಳು** :

ಪ್ರತಿ ವರ್ಷ ಅಬಕಾರಿ ವರ್ಷ ಕೊನೆಗೊಂಡ ನಂತರ ಅಬಕಾರಿ ರಾಜಸ್ವ, ಮದ್ಯ ಉತ್ಪಾದನೆ, ಮಾರಾಟ, ಆಮದು ಮತ್ತು ರಫ್ತು, ಪ್ರಚಲಿತ ಲೈಸೆನ್ಸ್ ಶುಲ್ಕ ಮತ್ತು ಅಬಕಾರಿ ಸುಂಕದ ವಿವರಗಳು, ಅಪರಾಧ ಮತ್ತು ಜಾರಿ ಚಟುವಟಿಕೆಗಳು, ವಿವಿಧ ಸನ್ನದುಗಳ ನವೀಕರಣ, ಇಲಾಖೆಯ ಅಧಿಕಾರಿಗಳ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸ ಈ ವಿವರಗಳನ್ನು ಒಳಗೊಂಡ '**ಅಬಕಾರಿ ಅಂಕಿ ಅಂಶಗಳ ವರದಿ**'ಯನ್ನು ತರಲಾಗುತ್ತಿದೆ.

## ಅಧ್ಯಾಯ – 5

### ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತದಲ್ಲಿನ ಸಾಧನೆಗಳು

5.1 ಇಲಾಖೆಯಲ್ಲಿ ಒಟ್ಟು **5,485** ಮಂಜೂರಾದ ಹುದ್ದೆಗಳಿದ್ದು, ಅದರಲ್ಲಿ **3,115** ಹುದ್ದೆಗಳನ್ನು ಭರ್ತಿಮಾಡಲಾಗಿದ್ದು, ಇನ್ನುಳಿದ **2,370** ಹುದ್ದೆಗಳು ಖಾಲಿಯಿರುತ್ತವೆ. ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಪದನಾಮ | ವೇತನ ಶ್ರೇಣಿ | ಮಂಜೂರಾದ ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಖಾಲಿ ಹುದ್ದೆ |
|---|---|---|---|---|---|
| 1 | ಅಬಕಾರಿ ಆಯುಕ್ತರು (ಭಾ.ಆ.ಸೇ) | 144200-218200 | 1 | 1 | 0 |
| 2 | ಹೆಚ್ಚುವರಿ ಅಬಕಾರಿ ಆಯುಕ್ತರು (ಭಾ.ಆ.ಸೇ) (ಕೇಂದ್ರಸ್ಥಾನ ಮತ್ತು ಆಡಳಿತ) | 37400-67000 | 1 | 0 | 1 |
| 3 | ಅಬಕಾರಿ ಅಪರ ಆಯುಕ್ತರು (ಭಾ.ಆ.ಸೇ/ಕ.ಆ.ಸೇ) | 37400-67000 | 1 | 1 | 0 |
| 4 | ಜಂಟಿ/ಉಪ ಆಯುಕ್ತರು (ಆಡಳಿತ) | 44250-60600 | 1 | 1 | 0 |
| 5 | ಹೆಚ್ಚುವರಿ ಅಬಕಾರಿ ಆಯುಕ್ತರು | 52500-73000 | 2 | 1 | 1 |
| 6 | ಅಬಕಾರಿ ಜಂಟಿ ಆಯುಕ್ತರು | 44250-60600 | 8 | 5 | 3 |
| 7 | ಅಬಕಾರಿ ಉಪ ಆಯುಕ್ತರು | 40050-56550 | 34 | 31 | 3 |
| 8 | ಉಪ ನಿರ್ದೇಶಕರು (ಸಾಂಖ್ಯಿಕ) | 36300-53850 | 1 | 1 | 0 |

| | | | | | |
|---|---|---|---|---|---|
| 9 | ಹಿರಿಯ ಲೆಕ್ಕಾಧಿಕಾರಿಗಳು | 56100-177500 | 1 | 1 | 0 |
| 10 | ಹಿರಿಯ ಆಂತರಿಕ ಪರಿಶೋಧಕರು | 56100-177500 | 1 | 0 | 1 |
| 11 | ಅಬಕಾರಿ ಅಧೀಕ್ಷಕರು | 28100-50100 | 94 | 24 | 70 |
| 12 | ಮುಖ್ಯ ರಾಸಾಯನಿಕ ತಜ್ಞರು | 28100-50100 | 1 | 1 | 0 |
| 13 | ಸಹಾಯಕ ನಿರ್ದೇಶಕರು(ಸಾಂಖ್ಯಿಕ) | 22800-43200 | 1 | 1 | 0 |
| 14 | ಅಬಕಾರಿ ಉಪ ಅಧೀಕ್ಷಕರು | 21600-40050 | 105 | 79 | 26 |
| 15 | ಹಿರಿಯ ರಾಸಾಯನಿಕ ತಜ್ಞರು | 21600-40050 | 1 | 0 | 1 |
| 16 | ಕಛೇರಿ ಅಧೀಕ್ಷಕರು | 17650- 32000 | 43 | 36 | 7 |
| 17 | ಕಿರಿಯ ರಾಸಾಯನಿಕ ತಜ್ಞರು | 11600-21000 | 2 | 0 | 2 |
| 18 | ಪ್ರಯೋಗಲಾಯ ಸಹಯಕರು | 20000-36300 | 2 | 0 | 2 |
| 19 | ಅಬಕಾರಿ ನಿರೀಕ್ಷಕರು | 20000-36300 | 470 | 356 | 114 |
| 20 | ಸಹಾಯಕ ಲೆಕ್ಕಾಧಿಕಾರಿಗಳು | 53100-167800 | 5 | 3 | 2 |
| 21 | ಅಬಕಾರಿ ಉಪ ನಿರೀಕ್ಷಕರು | 16000-29600 | 631 | 491 | 123 |
| 22 | ಪ್ರಥಮ ದರ್ಜೆ ಸಹಾಯಕರು | 14550-26700 | 269 | 152 | 117 |
| 23 | ಶೀಘ್ರಲಿಪಿಗಾರರು | 14550-26700 | 52 | 26 | 26 |
| 24 | ದ್ವಿತೀಯ ದರ್ಜೆ ಸಹಾಯಕರು | 11600-21000 | 359 | 257 | 102 |
| 25 | ಟೈಪಿಸ್ಟ್ | 11600-21000 | 42 | 9 | 33 |
| 26 | ಹಿರಿಯ ಅಬಕಾರಿ ರಕ್ಷಕರು | 12500-24000 | 345 | 162 | 183 |
| 27 | ಅಬಕಾರಿ ರಕ್ಷಕರು | 11600-21000 | 2,475 | 1,213 | 1,262 |
| 28 | ಹಿರಿಯ ವಾಹನ ಚಾಲಕರು | 14550-26700 | 83 | 80 | 03 |
| 29 | ವಾಹನ ಚಾಲಕರು | 11600-21000 | 359 | 112 | 247 |
| 30 | ಗ್ರೂಪ್ ಡಿ ನೌಕರರು | 9600-14550 | 95 | 71 | 24 |
| | **ಒಟ್ಟು** | | **5,485** | **3,115** | **2,370** |

**5.2 ಎ, ಬಿ, ಸಿ ಮತ್ತು ಡಿ ಗುಂಪುಗಳಲ್ಲಿನ ಹುದ್ದೆಗಳು ಮತ್ತು 2016-17 ರಲ್ಲಿನ ನಿವೃತ್ತಿಗಳು :**

**5.2.1 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳು.**

| ಕ್ರ.ಸಂ | ಗ್ರೂಪ್ 'ಎ' | | | | |
|---|---|---|---|---|---|
| | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು | ಖಾಲಿ ಹುದ್ದೆಗಳು | (+) ಅಥವಾ (–) | 2016–17ನೇ ವರ್ಷದಲ್ಲಿ ಆದ ನಿವೃತ್ತಿಗಳು |
| 1. | 146 | 67 | 79 | - | 08 |

| ಕ್ರ.ಸಂ | ಗ್ರೂಪ್ 'ಬಿ' | | | | |
|---|---|---|---|---|---|
| | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು | ಖಾಲಿ ಹುದ್ದೆಗಳು | (+) ಅಥವಾ (–) | 2016–17ನೇ ವರ್ಷದಲ್ಲಿ ಆದ ನಿವೃತ್ತಿಗಳು |
| 1. | 112 | 83 | 29 | - | 01 |

### 5.2.2 ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳು.

| ಕ್ರ. ಸಂ | ಪದನಾಮ | ಮಂಜೂರಾದ ಹುದ್ದೆ | ಭರ್ತಿಯಾದ ಹುದ್ದೆ | ಖಾಲಿ ಇರುವ ಹುದ್ದೆ | 2016-17 ನೇ ವರ್ಷದಲ್ಲಿ ಆದ ನಿವೃತ್ತಿಗಳು |
|---|---|---|---|---|---|
| 1 | ಅಬಕಾರಿ ನಿರೀಕ್ಷಕರು | 470 | 356 | 114 | 02 |
| 2 | ಅಬಕಾರಿ ಉಪ ನಿರೀಕ್ಷಕರು | 631 | 491 | 140 | 06 |
| 3 | ಕಛೇರಿ ಅಧೀಕ್ಷಕರು | 43 | 36 | 07 | 01 |
| 4 | ಕಿರಿಯ ರಾಸಾಯನಿಕ ತಜ್ಞರು | 02 | 0 | 02 | 0 |
| 5 | ಪ್ರಥಮ ದರ್ಜೆ ಸಹಾಯಕರು | 269 | 152 | 117 | 02 |
| 6 | ಶೀಘ್ರಲಿಪಿಗಾರರು | 52 | 26 | 26 | 0 |
| 7 | ದ್ವಿತೀಯ ದರ್ಜೆ ಸಹಾಯಕರು | 359 | 257 | 102 | 01 |
| 8 | ಪ್ರಯೋಗಶಾಲಾ ಸಹಾಯಕರು | 02 | 0 | 02 | 0 |
| 9 | ಬೆರಳಚ್ಚುಗಾರರು | 42 | 9 | 33 | 0 |
| 10 | ಅಬಕಾರಿ ಹಿರಿಯ ರಕ್ಷಕ | 345 | 162 | 183 | 0 |
| 11 | ಅಬಕಾರಿ ರಕ್ಷಕ | 2,475 | 1,213 | 1,262 | 150 |
| 12 | ಹಿರಿಯ ವಾಹನ ಚಾಲಕ/ ವಾಹನ ಚಾಲಕ | 442 | 192 | 250 | 04 |
| 13 | ಗ್ರೂಪ್-ಡಿ | 95 | 71 | 24 | 01 |
| **ಒಟ್ಟು** | | **5,227** | **2,965** | **2,262** | **167** |

### 5.3. ಗುಂಪುವಾರು ಮತ್ತು ಲಿಂಗವಾರು ಅಧಿಕಾರಿಗಳು ಮತ್ತು ಸಿಬ್ಬಂದಿ :

### 5.3.1. ಗುಂಪು 'ಎ' ಮತ್ತು 'ಬಿ' :

| ಗುಂಪು ಎ | | | | | |
|---|---|---|---|---|---|
| ಪುರುಷರು | ಮಹಿಳೆಯರು | ಒಟ್ಟು | ಎಸ್. ಸಿ. | ಎಸ್. ಟಿ. | ಒಟ್ಟು |
| 49 | 18 | 67 | 06 | 06 | 12 |
| ಗುಂಪು ಬಿ | | | | | |
| ಪುರುಷರು | ಮಹಿಳೆಯರು | ಒಟ್ಟು | ಎಸ್. ಸಿ. | ಎಸ್. ಟಿ. | ಒಟ್ಟು |
| 74 | 09 | 83 | 21 | 07 | 28 |

### 5.3.2 ಗುಂಪು 'ಸಿ' ಮತ್ತು 'ಡಿ'

| ಕ್ರ.ಸಂ | ಪದನಾಮ | ಮಂಜೂರಾದ ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಪುರುಷರು | ಮಹಿಳೆಯರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
|---|---|---|---|---|---|---|---|
| 1. | ಅಬಕಾರಿ ನಿರೀಕ್ಷಕರು | 470 | 356 | 260 | 96 | 71 | 16 |
| 2. | ಅಬಕಾರಿ ಉಪ ನಿರೀಕ್ಷಕರು | 631 | 491 | 455 | 36 | 53 | 9 |
| 3. | ಕಛೇರಿ ಅಧೀಕ್ಷಕರು | 43 | 36 | 20 | 16 | 06 | 04 |
| 4. | ಪ್ರಥಮ ದರ್ಜೆ ಸಹಾಯಕರು | 02 | 0 | 0 | 0 | 0 | 0 |
| 5. | ಕಿರಿಯ ಕೆಮಿಸ್ಟ್ | 269 | 152 | 117 | 35 | 36 | 05 |
| 6. | ಶೀಘ್ರಲಿಪಿಗಾರರು | 52 | 26 | 17 | 09 | 02 | 01 |

| | | | | | | | |
|---|---|---|---|---|---|---|---|
| 7. | ದ್ವಿತೀಯ ದರ್ಜೆ ಸಹಾಯಕರು | 359 | 257 | 192 | 65 | 62 | 14 |
| 8. | ಪ್ರಯೋಗಶಾಲಾ ಸಹಾಯಕರು | 02 | 0 | 0 | 0 | 0 | 0 |
| 9. | ಬೆರಳಚ್ಚುಗಾರರು | 42 | 09 | 06 | 03 | 04 | 00 |
| 10. | ಅಬಕಾರಿ ಹಿರಿಯ ರಕ್ಷಕ | 345 | 162 | 152 | 10 | 23 | 06 |
| 11. | ಅಬಕಾರಿ ರಕ್ಷಕ | 2,475 | 1,213 | 1,155 | 58 | 293 | 102 |
| 12. | ಹಿರಿಯ ವಾಹನ ಚಾಲಕರು / ವಾಹನ ಚಾಲಕರು | 442 | 192 | 184 | 08 | 41 | 16 |
| 13. | ಗ್ರೂಪ್-ಡಿ | 95 | 71 | 30 | 41 | 18 | 05 |
| **ಒಟ್ಟು** | | **5,227** | **2,965** | **2,588** | **377** | **666** | **192** |

**5.4 ನೇಮಕಾತಿ :**

**5.4.1. ಅಬಕಾರಿ ಉಪ ನಿರೀಕ್ಷಕರು**

177+62 ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳನ್ನು 2015-16 ಮತ್ತು 2016-17 ನೇ ಸಾಲಿಗೆ ಭರ್ತಿ ಮಾಡಲು ಪ್ರಸ್ತಾವನೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪತ್ರ ಬರೆಯಲಾಗಿದೆ.

**5.4.2. ಅಬಕಾರಿ ರಕ್ಷಕರು**

ಸರ್ಕಾರವು 1003 ಅಬಕಾರಿ ರಕ್ಷಕರ ಹುದ್ದೆಗಳನ್ನು ತುಂಬಲು ಆರ್ಥಿಕ ಸಹಮತಿ ನೀಡಿರುತ್ತದೆ. ಅದರಂತೆ 1003 ಅಬಕಾರಿ ರಕ್ಷಕರ ಹುದ್ದೆಗಳನ್ನು 2014-15, 2015-16 ಮತ್ತು 2016-17 ನೇ ಸಾಲಿಗೆ ಭರ್ತಿ ಮಾಡಲು ಪ್ರಸ್ತಾವನೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪತ್ರ ಬರೆಯಲಾಗಿದೆ.

**5.4.3 ವಾಹನ ಚಾಲಕರು**

ಖಾಲಿ ಇರುವ ವಾಹನ ಚಾಲಕರ ಹುದ್ದೆಗಳಲ್ಲಿ 100 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿ ನೀಡಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಈ ಪೈಕಿ 48 ವಾಹನ ಚಾಲಕರು ಹುದ್ದೆಗಳಿಗೆ ನೇಮಕಾತಿ ಆದೇಶಗಳನ್ನು ನೀಡಿದ್ದು, ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ಅಬಕಾರಿ ಉಪ ಆಯುಕ್ತರಗಳಿಂದ ಕ್ರಮಕೈಗೊಳ್ಳಲಾಗುತ್ತಿದೆ.

ನೇರ ನೇಮಕಾತಿ ಅಡಿಯಲ್ಲಿ 188 ವಾಹನ ಚಾಲಕರ ಹುದ್ದೆಗಳನ್ನು 2014-15, 2015-16 ನೇ ಸಾಲಿಗೆ ತುಂಬಲು ಸರ್ಕಾರವು ಆರ್ಥಿಕ ಸಹಮತಿ ನೀಡಿದ್ದು, ಅದರಲ್ಲಿ ಈಗಾಗಲೇ 35 ವಾಹನ ಚಾಲಕರು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಜಿಲ್ಲಾ ಅಬಕಾರಿ ಉಪ ಆಯುಕ್ತರುಗಳಿಗೆ ಸೂಚನೆ ನೀಡಲಾಗಿದೆ.

**5.5 ತರಬೇತಿ**

| ಕ್ರ.ಸಂ | ತರಬೇತಿ ವಿಷಯ | ತರಬೇತಿಗೆ ನಿಯೋಜನೆಗೊಂಡಿದ್ದ ಅಧಿಕಾರಿ/ ಸಿಬ್ಬಂದಿ ಸಂಖ್ಯೆ |
|---|---|---|
| 1. | ಲೀಡರ್‌ಶೀಪ್ ಮತ್ತು ಮ್ಯಾನೇಜ್‌ರಿಯಲ್ ಸ್ಕಿಲ್ | 04 |
| 2. | ಕೋರ್ಸ್ ಆನ್ ಆರ್‌ಟಿಐ ಆಕ್ಟ್ | 10 |
| 3. | ಲೀಡರ್‌ಶೀಪ್ ಸ್ಕಿಲ್ | 05 |
| 4. | ಆಡಳಿತ್ಮಾಕ ಕಾನೂನು | 10 |
| 5. | ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಪ್ರೋಗ್ರಾಮ್ | 12 |
| 6. | ಕಾರ್ಯನಿರ್ವಹಣೆ, ಸಾಮರ್ಥ್ಯಾಭಿವೃದ್ಧಿ ಹಾಗೂ ಪರಿಣಾಮಕಾರಿ ನಿರ್ವಹಣೆ. | 02 |
| 7. | ಮಾನಸಿಕ ಒತ್ತಡ, ಸಂವಹನ ಕೌಶಲ್ಯ | 02 |
| 8. | ಮಾನವ ಹಕ್ಕುಗಳು, ಮಹಿಳೆ ಮತ್ತು ಮಕ್ಕಳ ಹಕ್ಕುಗಳು | 02 |

| | | |
|---|---|---|
| 9. | ಪುನರ್ ಮನನ | 02 |
| 10. | ಗಣಕಯಂತ್ರ | 02 |
| 11. | ವೃತ್ತಿ ಬುನಾದಿ | 02 |
| 12. | ನಡತೆ ನಿಯಮಗಳು ಹಾಗೂ ಸಿ.ಸಿ.ಎ ನಿಯಮಗಳು | 02 |
| 13. | ಹಣಕಾಸು ನಿರ್ವಹಣೆ, ಖರೀದಿ ನಿಯಮ, ಕೆಎಫ್‌ಸಿ, ಎಂಸಿಎ. | 02 |
| 14. | ಕರ್ತವ್ಯ ಮತ್ತು ಜವಾಬ್ದಾರಿ | 02 |
| 15. | ಲೆಕ್ಕ ಪರಿಶೋಧನಾ ಮತ್ತು ಅನುಪಾಲನಾ ವರದಿ (ಪ್ರಯೋಗಿಕ) | 02 |
| 16. | ಗಣಕಯಂತ್ರ (ಪ್ರಬುಧ್ಧಿ) | 02 |
| 17. | ವೃತ್ತಿ ಬುನಾಧಿ | 02 |
| 18. | ಅನ್‌ಲೈನ್‌ನಲ್ಲಿ ಆದಾಯ ತೆರಿಗೆ ತಯಾರಿಸುವ ಬಗ್ಗೆ. | 02 |
| 19 | ಸರ್ಕಾರಿ ವ್ಯಾಜ್ಯಗಳ ನಿರ್ವಹನೆಯಲ್ಲಿ ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ. | 02 |
| 20 | ಬಿಲ್ಲುಗಳ ತಯಾರಿಕೆ ಬಗ್ಗೆ. | 02 |
| 21 | ಕೆ.ಟಿ.ಟಿ.ಪಿ ಬಗ್ಗೆ | 02 |
| 22 | ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಮಹಿಳೆಯರಿಗೆ ಮೀಸಲಾದ ಜಾನೂನುಗಳು ಮತ್ತು ಇತ್ತಿಚೀನ ಆದೇಶಗಳ ಬಗ್ಗೆ. | 02 |
| 23 | ಮಾಹಿತಿ ಹಕ್ಕು ಅಭಿನಿಯಮ ಹಾಗೂ ಸಕಾಲದ ಬಗ್ಗೆ | 02 |
| 24 | ಮನಸಿಕ ಒತ್ತಡದ ನಿರ್ವಹಣೆ, ವ್ಯಕ್ತಿತ್ವ ವಿಕಸನ ಹಾಗೂ ಸಂವಾಹನ ಕೌಶಲ್ಯ ಬಗ್ಗೆ. | 02 |
| | **ಒಟ್ಟು** | **79** |

**5.6 ಬಾಹ್ಯಮೂಲದ ಆಧಾರದ ಮೇಲಿನ ಹುದ್ದೆಗಳು :**

1. **ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರು.**

ಸರ್ಕಾರದ ಪತ್ರ ಸಂಖ್ಯೆ: ಆಇ/148/ಇಪಿಎಸ್/2010 ದಿನಾಂಕ: 06-12-2010 ಮತ್ತು ಎಎಇ/107/ಇಪಿಎಸ್/2014 ದಿನಾಂಕ: 27-10-2014 ರಂತೆ ಅಬಕಾರಿ ಇಲಾಖೆಯಲ್ಲಿನ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇರ ನೇಮಕಾತಿ ಹುದ್ದೆಗಳನ್ನು ಹೊರಗುತ್ತಿಗೆ (Out source) ಆಧಾರದಲ್ಲಿ ಖಾಲಿ ಇರುವ 11 ಬೆರಳಚ್ಚುಗಾರರ ಹುದ್ದೆಗಳನ್ನು ಕಿಯೋನಿಕ್ಸ್ ಮೂಲಕ ಅಬಕಾರಿ ಆಯುಕ್ತರ ಕಛೇರಿಯಲ್ಲಿ ನೇಮಿಸಿಕೊಳ್ಳಲಾಗಿರುತ್ತದೆ.

**5.7 ಪ್ರಶಸ್ತಿ / ಪದಕಗಳು:- ಇರುವುದಿಲ್ಲ -**

**5.8 ಅಧೀನ ಕಚೇರಿಗಳ ತಪಾಸಣೆ:**

**5.8.1. ಅಬಕಾರಿ ಜಂಟಿ ಆಯುಕ್ತರು / ಉಪ ಆಯುಕ್ತರು ನಡೆಸಿದ ತಪಾಸಣೆಗಳು:**

| ಕ್ರ.ಸಂ | **ಹುದ್ದೆ** | **ತಪಾಸಣೆ ಮಾಡಿದ ಕಚೇರಿಗಳು.** |
|---|---|---|
| 1. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಧಾರವಾಡ ಉಪ ವಿಭಾಗ. ಧಾರವಾಡ ಜಿಲ್ಲೆ(ದಿ:21/004/2016) |
| 2. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಕುಂದಗೋಳ ವಲಯ ವಲಯ, ಬೆಳಗಾವಿ ಜಿಲ್ಲೆ (ದಿ:22/04/2016) |
| 3. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಬೆಳಗಾವಿ ಉತ್ತರ ವಲಯ, ಬೆಳಗಾವಿ ಜಿಲ್ಲೆ (ದಿ:13/07/2016) |

| | | |
|---|---|---|
| 4. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಅಥಣಿ ವಲಯ, ಬೆಳಗಾವಿ ಜಿಲ್ಲೆ (ದಿ:18/07/2016) |
| 5. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ರಾಯಭಾಗ ವಲಯ, ಬೆಳಗಾವಿ ಜಿಲ್ಲೆ (ದಿ:19/07/2016) |
| 6. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ಉಪ ಅಧೀಕ್ಷಕರ ಕಛೇರಿ, ಚಿಕ್ಕೋಡಿ ಉಪ ವಿಭಾಗ , ಬೆಳಗಾವಿ ಜಿಲ್ಲೆ (ದಿ:20/07/2016) |
| 7. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ಉಪ ಆಯುಕ್ತರ ಕಛೇರಿ, ವಿಜಯಪುರ ಜಿಲ್ಲೆ (ದಿ:25/07/2016) |
| 8. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ಉಪ ಅಧೀಕ್ಷಕರ ಕಛೇರಿ, ವಿಜಯಪುರ ಉಪ ವಿಭಾಗ , ವಿಜಯಪುರ ಜಿಲ್ಲೆ (ದಿ:26/07/2016) |
| 9. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ವಿಜಯಪುರೆ ವಲಯ, ವಿಜಯಪುರ ಜಿಲ್ಲೆ (ದಿ:27/07/2016) |
| 10. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ನವಲಗುಂದ ವಲಯ, ಧಾರವಾಡ ಜಿಲ್ಲೆ (ದಿ:30/08/2016) |
| 11. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಕಲಘಟಗಿ ವಲಯ, ಧಾರವಾಡ ಜಿಲ್ಲೆ (ದಿ:28/09/2016) |
| 12. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ಉಪ ಅಧೀಕ್ಷಕರ ಕಛೇರಿ, ಹುಬ್ಬಳ್ಳಿ ಉಪ ವಿಭಾಗ, ಧಾರವಾಡ ಜಿಲ್ಲೆ (ದಿ:28/09/2016) |
| 13. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಜಮಖಂಡಿ ವಲಯ, ಬೆಳಗಾವಿ ಜಿಲ್ಲೆ (ದಿ:08/11/2016) |
| 14. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಮುಧೋಳ ವಲಯ, ಬಾಗಲಕೋಟೆ ಜಿಲ್ಲೆ (ದಿ:09/11/2016) |
| 15. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಮುದ್ದೇಬಿಹಾಳ ವಲಯ, ವಿಜಯಪುರ ಜಿಲ್ಲೆ (ದಿ:15/03/2016) |
| 16. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಬಸವನ ಬಾಗೇವಾಡಿ ವಲಯ, ವಿಜಯಪುರ ಜಿಲ್ಲೆ (ದಿ:16/03/2017) |
| 17. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಹುನಗುಂದ ವಲಯ, ಬಾಗಲಕೋಟೆ ಜಿಲ್ಲೆ (ದಿ:14/03/2017) |
| 18. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಸಿಂದಗಿ ವಲಯ, ವಿಜಯಪುರ ಜಿಲ್ಲೆ (ದಿ:21/02/2017) |
| 19. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಗೋಕಾಕ್ ವಲಯ, ಬೆಳಗಾವಿ ಜಿಲ್ಲೆ (ದಿ:21/02/2017) |
| 20. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಇಂಡಿ ವಲಯ, ವಿಜಯಪುರ ಜಿಲ್ಲೆ (ದಿ:22/02/2017) |
| 21. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಬಾಗಲಕೋಟೆ ವಲಯ, ಬಾಗಲಕೋಟೆ ಜಿಲ್ಲೆ (ದಿ:20/02/2017) |
| 22. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಹುಬ್ಬಳ್ಳಿ ವಲಯ-2, ಧಾರವಾಡ ಜಿಲ್ಲೆ (ದಿ:31/01/2017) |
| 23. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಚನ್ನರಾಯಪಟ್ಟಣ ವಲಯ, ಹಾಸನ ಜಿಲ್ಲೆ, (ದಿ:25/01/2017) |
| 24. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ಉಪ ಆಯುಕ್ತರ ಕಛೇರಿ, ಚಾಮರಾಜನಗರ ಜಿಲ್ಲೆ (ದಿ:26/10/2016) ಮತ್ತು (27-10-2017) |
| 25. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ಉಪ ಆಯುಕ್ತರ ಕಛೇರಿ, ಮೈಸೂರು ಜಿಲ್ಲೆ (ದಿ:26/10/2016) ಮತ್ತು (27-10-2017) |
| 26. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ಉಪ ಆಯುಕ್ತರ ಕಛೇರಿ, ಚಿಕ್ಕಮಗಳೂರು ಜಿಲ್ಲೆ (ದಿ:21/11/2016) |

| | | |
|---|---|---|
| 27. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ಉಪ ಆಯುಕ್ತರ ಕಛೇರಿ, ಮಂಡ್ಯ ಜಿಲ್ಲೆ (ದಿ:03/11/2016) |
| 28. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಮೈಸೂರು ವಲಯ-1, ಮೈಸೂರು ಜಿಲ್ಲೆ (ದಿ:27/07/2016) |
| 29. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಕೆ.ಆರ್. ನಗರ ವಲಯ, ಮೈಸೂರು ಜಿಲ್ಲೆ (ದಿ:18/08/2016) |
| 30. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಅರಸಿಕೆರೆ ವಲಯ, ಹಾಸನ ಜಿಲ್ಲೆ (ದಿ:24/09/2016) |
| 31. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಗುಂಡ್ಲುಪೇಟೆ ವಲಯ, ಚಾಮರಾಜನಗರ ಜಿಲ್ಲೆ (ದಿ:29/06/2016) |
| 32. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಮೂಡಿಗೆರೆ ವಲಯ, ಚಿಕ್ಕಮಗಳೂರು ಜಿಲ್ಲೆ (ದಿ:30/01/2017) |
| 33. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಎನ್. ಆರ್ ಪುರ ವಲಯ, ಚಿಕ್ಕಮಗಳೂರು ಜಿಲ್ಲೆ (ದಿ:22/02/2017) |
| 34. | ಅಬಕಾರಿ ಜಂಟಿ ಆಯುಕ್ತರು(ಇ&ಐ), ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಕೊಪ್ಪ ವಲಯ, ಚಿಕ್ಕಮಗಳೂರು ಜಿಲ್ಲೆ (ದಿ:28/02/2017) |
| 35. | ಅಬಕಾರಿ ಉಪ ಆಯುಕ್ತರು ಕಛೇರಿ, ದಾವಣಗೆರೆ ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಚನ್ನಗಿರಿ ವಲಯ, ದಾವಣಗೆರೆ ಜಿಲ್ಲೆ (ದಿ:19/11/2016) |
| 36. | ಅಬಕಾರಿ ಉಪ ಆಯುಕ್ತರು ಕಛೇರಿ, ಬೆಂಗಳೂರು (ಪೂರ್ವ) ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಮುನಿರೆಡ್ಡಿಪಾಳ್ಯ ವಲಯ, ಬೆಂಗಳೂರು (ಪೂರ್ವ) ಜಿಲ್ಲೆ (ದಿ:14/02/2017) |
| 37. | ಅಬಕಾರಿ ಉಪ ಆಯುಕ್ತರು ಕಛೇರಿ, ಬೆಂಗಳೂರು (ದಕ್ಷಿಣ) ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಕಲಾಸಿಪಾಳ್ಯ ವಲಯ, ಬೆಂಗಳೂರು (ದಕ್ಷಿಣ) ಜಿಲ್ಲೆ (ದಿ:27/01/2017) |
| 38. | ಅಬಕಾರಿ ಉಪ ಆಯುಕ್ತರು ಕಛೇರಿ, ಬೆಂಗಳೂರು (ಪೂರ್ವ) ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಹಲಸೂರು ವಲಯ, ಬೆಂಗಳೂರು (ಪೂರ್ವ) ಜಿಲ್ಲೆ (ದಿ:18/11/2016) |
| 39. | ಅಬಕಾರಿ ಉಪ ಆಯುಕ್ತರು ಕಛೇರಿ, ಬೆಂಗಳೂರು (ಪಶ್ಚಿಮ) ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಜೆ.ಪಿ ನಗರ ವಲಯ, ಬೆಂಗಳೂರು (ಪಶ್ಚಿಮ) ಜಿಲ್ಲೆ (ದಿ:19/09/2016) ಮತ್ತು (22-09-2016) |
| 40. | ಅಬಕಾರಿ ಉಪ ಆಯುಕ್ತರು ಕಛೇರಿ, ಬೆಂಗಳೂರು (ಪಶ್ಚಿಮ) ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಪದ್ಮನಾಭ ನಗರ ವಲಯ, ಬೆಂಗಳೂರು (ಪಶ್ಚಿಮ) ಜಿಲ್ಲೆ (ದಿ:26/09/2016) ಮತ್ತು (28-09-2016) |
| 41. | ಅಬಕಾರಿ ಉಪ ಆಯುಕ್ತರು ಕಛೇರಿ, ಮೈಸೂರು ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಹುಣಸೂರು ವಲಯ, ಮೈಸೂರು ಜಿಲ್ಲೆ (ದಿ:20/09/2016) |
| 42. | ಅಬಕಾರಿ ಉಪ ಆಯುಕ್ತರು ಕಛೇರಿ, ಮೈಸೂರು ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಪಿರಿಯಾಪಟ್ಟಣ ವಲಯ, ಮೈಸೂರು ಜಿಲ್ಲೆ (ದಿ:20/10/2016) |
| 43. | ಅಬಕಾರಿ ಉಪ ಆಯುಕ್ತರು ಕಛೇರಿ, ಮಂಡ್ಯ ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಮಂಡ್ಯ ವಲಯ, ಮಂಡ್ಯ ಜಿಲ್ಲೆ (ದಿ:17/10/2016) |
| 44. | ಅಬಕಾರಿ ಉಪ ಆಯುಕ್ತರು ಕಛೇರಿ, ಮಂಡ್ಯ ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಮಳವಳ್ಳಿ ವಲಯ, ಮಂಡ್ಯ ಜಿಲ್ಲೆ (ದಿ:08/06/2016) |
| 45. | ಅಬಕಾರಿ ಉಪ ಆಯುಕ್ತರು ಕಛೇರಿ, ಮಂಡ್ಯ ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಮಳವಳ್ಳಿ ವಲಯ, ಮಂಡ್ಯ ಜಿಲ್ಲೆ (ದಿ:08/06/2016) |

## ಅಧ್ಯಾಯ – 6

### 6.1 ಅಧೀನ ಕಛೇರಿಗಳ ಆಂತರಿಕ ಲೆಕ್ಕ ಪರಿಶೋಧನೆ ಮತ್ತು ಕಛೇರಿ ತಪಾಸಣೆ.

**6.1.1 ಈ ಕಛೇರಿಯ ಸಿಬ್ಬಂದಿ ಮತ್ತು ಲೆಕ್ಕ ವಿಭಾಗದ ಸಿಬ್ಬಂದಿಯವರಿಂದ ಅದೀನ ಕಛೇರಿ ತಪಾಸಣೆ ಮತ್ತು ಆಂತರಿಕ ಲೆಕ್ಕ ಪರಿಶೋದನೆಗೆ ಒಳಪಟ್ಟಿರುವ ಕಛೇರಿಗಳು.**

| **ಕಛೇರಿ** | **ಸಂಖ್ಯೆ** |
|---|---|
| ಅಬಕಾರಿ ಉಪ ಆಯುಕ್ತರ ಕಛೇರಿಗಳು | - |
| ಉಪ ವಿಭಾಗಗಳು | - |
| ವಲಯ ಕಛೇರಿಗಳು | - |
| ಡಿಸ್ಟಲರಿ | - |
| **ಒಟ್ಟು** | - |

**6.1.2 ಹಣ ಮೌಲ್ಯವನ್ನು ಒಳಗೊಂಡ ಕಂಡಿಕೆಗಳು ಮತ್ತು ಮೊತ್ತ :**

| **ಕಛೇರಿ** | **ಕಂಡಿಕೆಗಳು** | **ಮೊತ್ತ (ರೂ.)** |
|---|---|---|
| ಅಬಕಾರಿ ಜಂಟಿ ಆಯುಕ್ತರ ಕಛೇರಿಗಳು | ಇಲ್ಲ | ಇಲ್ಲ |
| ಅಬಕಾರಿ ಉಪ ಆಯುಕ್ತರ ಕಛೇರಿಗಳು | ಇಲ್ಲ | ಇಲ್ಲ |
| ವಲಯಗಳು | ಇಲ್ಲ | ಇಲ್ಲ |
| ಭಟ್ಟಿ ಕಾರ್ಖಾನೆಗಳು | ಇಲ್ಲ | ಇಲ್ಲ |
| ಉಪ ವಿಭಾಗಗಳು | ಇಲ್ಲ | ಇಲ್ಲ |
| ರಾಜ್ಯ ವಿಚಕ್ಷಣ ದಳ | ಇಲ್ಲ | ಇಲ್ಲ |
| **ಒಟ್ಟು** | **ಇಲ್ಲ** | **ಇಲ್ಲ** |

**6.1.3 ಇತ್ಯರ್ಥಗೊಂಡ ಅಡಿಟ್ ಪ್ಯಾರಗಳು ಹಾಗೂ ಮೌಲ್ಯ :**

| **ಕಛೇರಿ** | **ಕಂಡಿಕೆಗಳು** | **ಮೊತ್ತ (ರೂ.)** |
|---|---|---|
| ಅಬಕಾರಿ ಉಪ ಆಯುಕ್ತರ ಕಛೇರಿಗಳು | ಇಲ್ಲ | ಇಲ್ಲ |
| ಉಪ ವಿಭಾಗಗಳು | ಇಲ್ಲ | ಇಲ್ಲ |
| ಭಟ್ಟಿ ಕಾರ್ಖಾನೆಗಳು | ಇಲ್ಲ | ಇಲ್ಲ |
| **ಒಟ್ಟು** | **ಇಲ್ಲ** | **ಇಲ್ಲ** |

## 6.2 ವಿಧಾನ ಸಭೆ ಮತ್ತು ವಿಧಾನ ಪರಿಷತ್ ಅಧಿವೇಶನಗಳಲ್ಲಿ ಸ್ವೀಕರಿಸಲಾದ / ಉತ್ತರಿಸಲಾದ ಪ್ರಶ್ನೆಗಳು:

| **ಅಧಿವೇಶನ** | **ಚುಕ್ಕೆ ಗುರುತಿನ ಪ್ರಶ್ನೆಗಳು** | | **ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು** | |
|---|---|---|---|---|
| | **ಸ್ವೀಕೃತ** | **ಉತ್ತರಿಸಲಾದ** | **ಸ್ವೀಕೃತ** | **ಉತ್ತರಿಸಲಾದ** |
| ವಿಧಾನ ಸಭೆ | 21 | 21 | 159 | 159 |
| ವಿಧಾನ ಪರಿಷತ್ | 09 | 09 | 79 | 79 |

ಎಲ್ಲಾ ವಿಧಾನ ಸಭೆ ಹಾಗೂ ವಿಧಾನ ಪರಿಷತ್ ಅಧಿವೇಶನಗಳಲ್ಲಿ ಸ್ವೀಕೃತವಾದ ಪ್ರಶ್ನೆಗಳಿಗೆ ಸರ್ಕಾರಕ್ಕೆ ಉತ್ತರವನ್ನು ಸಲ್ಲಿಸಲಾಗಿರುತ್ತದೆ.

## 6.3 ವಿವಿಧ ನ್ಯಾಯಾಲಯಗಳು ಹಾಗೂ ಟ್ರಿಬ್ಯೂನಲ್‌ಗಳಲ್ಲಿ ಇಲಾಖೆ ವತಿಯಿಂದ ಹಾಗೂ ಇಲಾಖೆಯ ವಿರುದ್ಧವಾಗಿ ಇರುವ ಪ್ರಕರಣಗಳು

### 6.3.1 ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ (ರಿಟ್ ವಿಭಾಗ) ದಾಖಲಿಸಲಾದ ಪ್ರಕರಣಗಳು.

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 69 |
| ಸ್ವೀಕರಿಸಲಾದ ಪ್ರಕರಣಗಳು | 156 |
| **ಒಟ್ಟು** | **225** |
| ಆದೇಶಗಳನ್ನು ಹೊರಡಿಸಿರುವುದು | 144 |
| **ಬಾಕಿ ಪ್ರಕರಣಗಳು** | **81** |

### 6.3.2 ಕರ್ನಾಟಕ ಆಡಳಿತ ಮಂಡಳಿಯಲ್ಲಿ (ಕೆಎಟಿ) ದಾಖಲಿಸಲಾದ ಪ್ರಕರಣಗಳು.

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 215 |
| ಸ್ವೀಕರಿಸಲಾದ ಪ್ರಕರಣಗಳು | 30 |
| **ಒಟ್ಟು** | 245 |
| ಆದೇಶಗಳನ್ನು ಹೊರಡಿಸಿರುವುದು | 37 |
| **ಬಾಕಿ ಪ್ರಕರಣಗಳು** | **208** |

### 6.3.3 ಅಬಕಾರಿ ಆಯುಕ್ತರ ನ್ಯಾಯಾಲಯದಲ್ಲಿ (ಮನವಿ) ದಾಖಲಿಸಲಾದ ಪ್ರಕರಣಗಳು.

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 556 |
| ಸ್ವೀಕರಿಸಲಾದ ಪ್ರಕರಣಗಳು | 312 |
| **ಒಟ್ಟು** | **868** |
| ಆದೇಶಗಳನ್ನು ಹೊರಡಿಸಿರುವುದು | 756 |
| **ಬಾಕಿ ಪ್ರಕರಣಗಳು** | **112** |

## 6.4 ಮಾಹಿತಿ ಹಕ್ಕು ಅಧಿನಿಯಮದ ಜಾರಿ:

ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕರಿಸಲಾದ ಆರ್.ಟಿ.ಐ ಅರ್ಜಿಗಳ ವಿವರ

| ಕ್ರ. ಸಂ. | ವಿವರಗಳು | ಸಂಖ್ಯೆ |
|---|---|---|
| 1. | ಪ್ರಾರಂಭಿಕ ಶಿಲ್ಕು | 31 |
| 2. | ಸ್ವೀಕೃತ ಒಟ್ಟು ಅರ್ಜಿಗಳು | 1,993 |
| 3. | ಉತ್ತರಿಸಲಾದ ಅರ್ಜಿಗಳು | 1,976 |
| 4. | ಅರ್ಜಿದಾರರಿಂದ ನಿಗದಿತ ಶುಲ್ಕಪಾವತಿಯಾಗದಿರುವುದು. | 112 |
| 5. | ನಿಯಮ 8(1)(ಹೆಚ್) ಮತ್ತು ನಿಯಮ 14ರಡಿ ಉತ್ತರಿಸಲಾದ ಅರ್ಜಿಗಳು | 04 |
| 6. | ಬಾಕಿ (30 ದಿನಗಳ ಸಮಯದ ಒಳಗೆ) | 48 |
| 7. | ಮಾಹಿತಿ ಆಯೋಗದಲ್ಲಿ ಮೇಲ್ಮನವಿಗಾಗಿ ಇರುವ ಬಾಕಿ ಅರ್ಜಿಗಳು | 0 |

**ಸಹಿ/-**

**ಅಬಕಾರಿ ಆಯುಕ್ತರು**